

ತುಕ್ಕುಹಿಡಿದ ಟೂಲ್ಸ್‌ಗಳಲ್ಲ, ಚಾಕೊಲೇಟ್‌ಗಳು



ಅದ್ಭುತ ವಾಸ್ತುಶಿಲ್ಪ ಆಟೋಮಿಯಮ್

## ಕಾಮಿಕ್ ಸ್ಟ್ರಿಪ್

ಪ್ರಪಂಚದ ವಿವಿಧ ನಗರಗಳಲ್ಲಿ ಒಂದೊಂದು ಕಲಾಪ್ರಕಾರಕ್ಕೆ ಮೀಸಲಾದ ಬೀದಿಗಳು, ಮೊಹಲ್ಲಾಗಳು ಇವೆಯಾದರೂ, ಕಾಮಿಕ್ ಚಿತ್ರಗಳಿಗಾಗಿಯೇ ಕೆಲವು ರಸ್ತೆಗಳಿರುವುದು ಬಹುಶಃ ಬ್ರುಸೆಲ್ಸ್‌ನಲ್ಲಿ ಮಾತ್ರ. ಸಿಟಿ ಸೆಂಟರ್‌ನ ಎಲ್ಲ ಕಟ್ಟಡಗಳ ಹೊರ ಗೋಡೆಗಳ ಮೇಲೆ ಬೆಲ್ಜಿಯನ್ ಕಾಮಿಕ್ ಪಾತ್ರಗಳನ್ನು ಚಿತ್ರಿಸಲಾಗಿದೆ.

## ಮನ್ನೆಕೆನ್ ಪಿಸ್

ಕಲಾವಿದ ಜೆರೋಮ್ ಡುಕ್ಯುಸ್ನೋಯ್ 1619ರಲ್ಲಿ ರಚಿಸಿದ 'ಮನ್ನೆಕೆನ್ ಪಿಸ್' ಕಾಲಾಂತರದಲ್ಲಿ ಸ್ವಲ್ಪ ಮಾರ್ಪಾಟಿಗೊಳಪಟ್ಟು ಈಗಿರುವ ರೂಪವನ್ನು 1965ರಲ್ಲಿ ಪಡೆಯಿತು. 24 ಇಂಚು ಎತ್ತರವಿರುವ ಕಂಚಿನ ಈ ಕಲಾಕೃತಿ ಬ್ರುಸ್ಸೆಲ್ಸ್‌ನ ಗ್ರಾಂಡ್ ಪ್ಲೇಸ್ ಸನಿಹದಲ್ಲಿದೆ. ಡಚ್ ಭಾಷೆಯಲ್ಲಿ ಮನ್ನೆಕಿನ್‌ಪಿಸ್‌ಎಂದರೆ 'ಮೂತ್ರ ಮಾಡುತ್ತಿರುವ ಪುಟ್ಟ ಬಾಲಕ' ಎಂದರ್ಥ. ಹುಡುಗನೊಬ್ಬ ಕಾರಂಜಿಯ ಪಾತ್ರೆಯೊಳಕ್ಕೆ ಮೂತ್ರ ಮಾಡುತ್ತಿರುವಂತಿರುವ ಈ ಕಲಾಕೃತಿ ಬ್ರುಸ್ಸೆಲ್ಸ್ ಜನರ ಹಾಸ್ಯ ಮನೋಧರ್ಮವನ್ನು, ಅವರ ಉಲ್ಲಾಸಭರಿತ ಜೀವನೋತ್ಸಾಹವನ್ನು ತೋರಿಸುತ್ತದೆ. ಅವರಿಗದು ಭಾವನಾತ್ಮಕ ಅಸ್ಮಿತೆಯ ಸಂಕೇತ. ಅದರೆದುರು ನಿಂತು ಫೋಟೊ ತೆಗೆದುಕೊಳ್ಳುವ ಪ್ರವಾಸಿಗರು, ಅದರ ಪ್ರತಿಕೃತಿಗಳನ್ನೂ ಮನೆಗೆ ಕೊಂಡೊಯ್ಯುತ್ತಾರೆ!

## ಚಾಕೊಲೇಟ್‌ಗಳ ಲೋಕ

ಸ್ವಿಟ್ಜರ್‌ಲ್ಯಾಂಡ್‌ನ ಜೀನ್‌ನ್ಯೂಹೌಸ್ ಅನ್ನುವವನು 1857ರಲ್ಲಿ ಬೆಲ್ಜಿಯಂನಲ್ಲಿ ಸಿಹಿ ತಿನಿಸುಗಳ ಅಂಗಡಿ ಪ್ರಾರಂಭಿಸಿ, ಅಲ್ಲಿ ಮೊದಲ ಬಾರಿಗೆ ಚಾಕೊಲೇಟ್ ಪರಿಚಯಿಸಿದ. ಇದೀಗ ಬೆಲ್ಜಿಯಂನಲ್ಲಿ ಚಾಕೊಲೇಟ್ ತಯಾರಿಸುವ 15 ಕಾರ್ಖಾನೆಗಳು, ಸುಮಾರು 2000ದಷ್ಟು ಚಾಕೊಲೇಟ್ ಅಂಗಡಿಗಳೂ ಇವೆ. ವಾರ್ಷಿಕ 12 ಬಿಲಿಯನ್ ಡಾಲರುಗಳಿಗೂ ಹೆಚ್ಚು ವಹಿವಾಟು ನಡೆಯುಯುವ ಮೂಲಕ ದೇಶದ ಆರ್ಥಿಕತೆಯಲ್ಲಿ ಚಾಕೊಲೇಟ್ ಉದ್ಯಮ ಪ್ರಮುಖ ಪಾತ್ರ ವಹಿಸಿದೆ.



ಮನ್ನೆಕೆನ್ ಪಿಸ್

ಚರ್ಚ್ ಸ್ಕೈರ್ ಬಳಿಯ ಗೌರ್‌ಮೆಟ್ ಎಂಬ ಚಾಕೊಲೇಟ್ ಅಂಗಡಿಯ ಒಳಗೆ ಸುತ್ತಾಡುತ್ತಿರುವಾಗ ಒಂದೆಡೆ ಶೋಕೇಸಿನಲ್ಲಿ ಜೋಡಿಸಿಟ್ಟಿದ್ದ ತುಕ್ಕು ಹಿಡಿದಂತಿದ್ದ ಕೆಲವು ವಸ್ತುಗಳನ್ನು ನೋಡಿ ಆಶ್ಚರ್ಯವಾಯಿತು. ಕೆಲಸದಲ್ಲಿ ಬಳಸುವ ರಿಂಚ್, ಕಟಿಂಗ್ ಪ್ಲೇಯರ್, ಸ್ಪಾನರ್, ನಟ್ಟು ಬೋಲ್ಟುಗಳು, ಸ್ಕ್ರೂಗಳು, ಬೀಗಗಳು, ಬಾಲ್ ಬೇರಿಂಗುಗಳು, ತಗಡಿನ ಕಾರಿನ ಮಾದರಿಗಳು, ಹೀಗೆ ಅನೇಕ ವಸ್ತುಗಳನ್ನಲ್ಲಿ ಜೋಡಿಸಿಡಲಾಗಿತ್ತು. ತುಕ್ಕು ಹಿಡಿದು ಹಾಳಾದ ಇವಕ್ಕೆ ಚಾಕೊಲೇಟ್ ಅಂಗಡಿಯಲ್ಲೇನು ಕೆಲಸ ಎಂಬ ಅನುಮಾನದಿಂದ ಅಂಗಡಿಯವರಲ್ಲಿ ವಿಚಾರಿಸಿದಾಗ, 'ಅವೆಲ್ಲಾ ಚಾಕೊಲೇಟುಗಳು' ಎನ್ನುವ ಉತ್ತರ ಬಂತು! ಟೂಲ್ ಬಾಕ್ಸಿನಲ್ಲಿ ಇಟ್ಟರೆ ಯಾವುದು ನಿಜವಾದದ್ದು, ಯಾವುದು ಚಾಕೊಲೇಟ್ ಎಂದು ಕಂಡು ಹಿಡಿಯುವುದು ಕಷ್ಟವಾಗುವಷ್ಟು ನೈಜವಾಗಿರುವ ಅವುಗಳನ್ನು 'ಚಾಕೊಲೇಟ್ ಟೂಲ್ಸ್' ಎನ್ನುತ್ತಾರೆ.

## ಆಟೋಮಿಯಮ್‌ಎಂಬ ಅದ್ಭುತ

ಆಟೋಮಿಯಮ್ ಬ್ರುಸೆಲ್ಸ್‌ನ ಲ್ಯಾಂಡ್‌ಮಾರ್ಕ್ ಕಟ್ಟಡ. ಆಟೋಮಿಯಮ್ ಅನ್ನು ಒಂದು ಕಲಾಕೃತಿ, ಪ್ರಪಂಚದ ಇಂತಹ ಏಕೈಕ ರಚನೆ, ಒಂದು ಪ್ರದರ್ಶನ ಆವರಣ, ಮತ್ತು ರಾಷ್ಟ್ರದ ಹೆಗ್ಗುರುತು ಎಂಬುದಾಗಿ ಗುರುತಿಸಲಾಗುತ್ತದೆ. 1958ರಲ್ಲಿ ನಡೆದ 'ಬ್ರುಸೆಲ್ಸ್ ವಾಣಿಜ್ಯ ಎಕ್ಸ್‌ಪೊ'ನ ಮುಖ್ಯ ಅಂಗಳವಾಗಿ ಈ ರಚನೆಯನ್ನು ನಿರ್ಮಿಸಲಾಯಿತು.

102 ಮೀಟರ್ ಎತ್ತರವಿರುವ ಆಟೋಮಿಯಮ್ ನಿರ್ಮಾಣ ಒಂದು ತಾಂತ್ರಿಕ ಸವಾಲಾಗಿತ್ತು. 60 ಅಡಿ ವ್ಯಾಸವಿರುವ ಒಂಬತ್ತು ಗೋಳಗಳನ್ನು ಹತ್ತು ಅಡಿ ವ್ಯಾಸವುಳ್ಳ ಕೊಳವೆಗಳಿಂದ ಜೋಡಿಸಿ, ಈ ರಚನೆಯನ್ನು ರೂಪಿಸಲಾಗಿದೆ. ಒಂಬತ್ತರಲ್ಲಿ ಆರು ಗೋಳಗಳಿಗೆ ಸಾರ್ವಜನಿಕರಿಗೆ ಪ್ರವೇಶವಿದೆ. ಒಂದೊಂದು ಗೋಳದಲ್ಲೂ ಮೂರು ಮಹಡಿಗಳಿವೆ. ಗೋಳಗಳ ಒಳಗೆ ಮೆಟ್ಟಿಲುಗಳು, ಎಸ್ಕಲೇಟರ್, ಲಿಫ್ಟ್ ಇರುವುದರಿಂದ ಪ್ರವಾಸಿಗರ ವೀಕ್ಷಣೆಗೆ ಅನುಕೂಲವಾಗಿದೆ. ಮಧ್ಯದ ನೇರ ಕೊಳವೆಯಲ್ಲಿ ಸೆಕೆಂಡಿಗೆ 20 ಅಡಿಯಷ್ಟು ಏರುವ ಅತಿ ವೇಗದ ಲಿಫ್ಟನ್ನು ಅಳವಡಿಸಲಾಗಿದೆ. 22 ಜನರನ್ನು ಮೇಲಿನ ಗೋಳಕ್ಕೆ ಕೇವಲ 23 ಸೆಕೆಂಡಿನಲ್ಲಿ ಒಯ್ಯುವ ಸಾಮರ್ಥ್ಯ ಅದಕ್ಕಿದೆ. (ದುಬೈನ ಬುರ್ಜ್ ಖಲೀಫಾದಲ್ಲಿರುವ ಲಿಫ್ಟಿನಲ್ಲಿ ಕೇವಲ 59 ಸೆಕೆಂಡಿನಲ್ಲಿ 124ನೇ ಮಹಡಿಗೆ ತಲುಪಿದ್ದೆವು. ಸೆಕೆಂಡಿಗೆ ಸುಮಾರು 34 ಅಡಿಗಳಷ್ಟು ವೇಗದಲ್ಲಿ ಆ ಲಿಫ್ಟ್ ಚಲಿಸಿತ್ತು!)

ದುಸ್ಥಿತಿಯಲ್ಲಿದ್ದ ಆಟೋಮಿಯಮ್ ಅನ್ನು 2004ರಲ್ಲಿ ರಿಪೇರಿ ಮತ್ತು ಮರುನಿರ್ಮಾಣದ ಸಲುವಾಗಿ ಮುಚ್ಚಲಾಗಿತ್ತು. ಮೊದಲು ಅಳವಡಿಸಿದ್ದ ಅಂದಗೆಟ್ಟಿದ್ದ ಅಲ್ಯೂಮಿನಿಯಮ್ ಹಾಳೆಗಳನ್ನು ತೆಗೆದು, ಸ್ಟೀಲ್ ಹಾಳೆಗಳನ್ನು ಅಳವಡಿಸಲಾಯಿತು. ಹೊಸದಾಗಿ ಎಲ್‌ಇಡಿ ದೀಪಗಳನ್ನು ಹೊರಭಾಗಕ್ಕೆ ಅಳವಡಿಸಲಾಯಿತು. 2006ರ ಫೆಬ್ರುವರಿ 14ರಂದು ಅಂದಿನ ಯುವರಾಜ ಪ್ರಿನ್ಸ್ ಫಿಲಿಪ್ ಅದನ್ನು ಉದ್ಘಾಟಿಸಿ, ಮತ್ತೆ ಸಾರ್ವಜನಿಕರಿಗಾಗಿ ಮುಕ್ತಗೊಳಿಸಿದ್ದರು.

ಸ್ಥಳೀಯ ಮಾರ್ಗದರ್ಶಿಯ ಜತೆ ಜತೆಗೆ ಹೆಜ್ಜೆ ಹಾಕುತ್ತಾ, ಬ್ರುಸೆಲ್ಸ್‌ನ ಕೆಲವು ಮುಖ್ಯ ಆಕರ್ಷಣೆಗಳ ಸೌಂದರ್ಯವನ್ನು ಸವಿದಿದ್ದು ಎಂದಿಗೂ ಮರೆಯಲಾಗದ ಅನುಭವವಾಗಿ ನಮ್ಮ ಮನದಲ್ಲುಳಿದಿದೆ.

ಪ್ರತಿಕ್ರಿಯಿಸಿ: feedback@sudha.co.in